## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ನಾನು ಬೆಂಗ್ಳೂರಿಗೆ ಬಂದ ಹೊಸತರಲ್ಲಿ ಒಮ್ಮೆ ನನ್ನ ಪತಿ ಬೆಂಗ್ಳೂರಿಗೆ ಬಂದಿದ್ದರು. ಹಾಲು ತರ್ಲಿಕ್ಕೆ ಅಂತ ಮನೆಯ ಹತ್ತಿರದ ಸಣ್ಣ ಕಿರಾಣಿ ಅಂಗಡಿಗೆ ಹೋಗಿದ್ರು. ಅಲ್ಲಿ ನಾಲ್ಕೈದು ಜನ ನಿಂತ್ಕೊಂಡು ಲೋಕಾಭಿರಾಮ ಮಾತಾಡ್ತಿದ್ರಂತೆ. ಇವರು ಅವರ ಹಿಂದುಗಡೆ ನಿಂತುಕೊಂಡು ‘ನಂದಿನಿ ಹಾಲು ಉಂಟಾ’ ಅಂತ ಕೇಳಿದ್ರಂತೆ. ಅಂಗಡಿಯವರಿಗೆ ಇವರ ಮಾತು ಕೇಳಿಸಿತೋ ಇಲ್ಲವ್ೋ. ಆದರೆ ಅಲ್ಲಿ ನಿಂತವರಲ್ಲಿ ಒಬ್ಬ ‘ನೀವು ಮಂಗ್ಳೂರ್‌ನೋರಾ’ ಎಂದು ಕೇಳಿದ್ರಂತೆ. ಇವರಿಗೆ ಮಾತಾಡಿಸುವವರು ಯಾರಾದರೂ ಒಬ್ಬರು ಸಿಕ್ಕಿದ್ರಲ್ಲ ಅಂತ ಭಾರೀ ಖುಷಿಯಾಗಿ ‘ಹೌದು, ಹೌದು ನಿಮಗೆ ಎಲ್ಲಿ ಆಯ್ತು’ ಅಂತ ಕೇಳಿದ್ರಂತೆ. ಅದಕ್ಕೆ ಆತ ‘ನಮ್ದು ಇಲ್ಲೇ ಪಕ್ಕದೂರು. ನೀವು ಬಂದು ಹಾಲು ಉಂಟಾ ಅಂತ ಕೇಳಿದ್ದಕ್ಕೆ ನೀವು ಮಂಗ್ಳೂರ್ ಇರ್ಬೇಕು ಅನ್ಕೊಂಡೆ’ ಎಂದ್ರಂತೆ. ಅಷ್ಟರಲ್ಲಿ ಅಂಗಡಿಯವರು ಇವರ ಕಡೆ ನೋಡಿ ಏನು ಬೇಕು ಅಂತ ಕೇಳಿ ಹಾಲಿನ ಪ್ಯಾಕೆಟ್ ಕೊಟ್ಟರಂತೆ. ‘ಉಂಟಾ’ ಎಂಬ ಚೆಂದದ ಕನ್ನಡ ಶಬ್ದ ಬೇರೆ ಕಡೆಯವರು ಜಾಸ್ತಿ ಉಪಯೋಗ ಮಾಡುವುದಿಲ್ಲ ಅಂತ ಕಾಣ್ತದೆ.

ಮೊದಲೇ ಹೇಳಿದ್ನಲ್ಲ, ನಾನು ಮಾತಾಡ್ಲಿಕ್ಕೆ ಸುರು ಮಾಡುವಾಗ್ಲೇ ಬೇರೆ ಊರಿನವರು ನೀವು ಮಂಗ್ಳೂರಾ ಅಂತ ಕೇಳ್ತಾರೆ, ಅಂತ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯವರು ಮಾತಾಡುವ ಕನ್ನಡಕ್ಕೆ ಮಂಗ್ಳೂರು ಕನ್ನಡ ಅಂತ ಹೇಳುವ ಕ್ರಮ ಉಂಟು. ಈಗಿನವರಿಗೆ ಅವಿಭಜಿತ ದಕ್ಷಿಣ ಕನ್ನಡ ಅಂದ್ರೆ ಗೊತ್ತಾಗ್ಲಿಕ್ಕಿಲ್ಲ. ಅದಕ್ಕೇ ಸ್ವಲ್ಪ ವಿವರಿಸಿ ಹೇಳ್ತೇನೆ.

ಕರ್ನಾಟಕದ ಕರಾವಳಿಯ ಜಿಲ್ಲೆಗಳನ್ನು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಅಂತ ಬಹಳ ಹಿಂದೆಯೇ ವಿಭಾಗಿಸಲಾಗಿತ್ತು. ಇದರಲ್ಲಿ ಕುಂದಾಪುರ, ಉಡುಪಿ, ಕಾರ್ಕಳ, ಮಂಗಳೂರು, ಬಂಟ್ವಾಳ, ಪುತ್ತೂರು, ಬೆಳ್ತಂಗಡಿ ಮತ್ತು ಸುಳ್ಯ ಅಂತ ಎಂಟು ತಾಲ್ಲೂಕುಗಳಿದ್ದವು. ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರ, ಮಂಗಳೂರು. ಆಡಳಿತ ನಡೆಸ್ಲಿಕ್ಕೆ ಸುಲಭ ಆಗ್ಬೇಕು ಅಂತ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರದ ಮೂರು ತಾಲ್ಲೂಕುಗಳಾದ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲ್ಲೂಕುಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬೇರೆ ಮಾಡಿ, ಹೊಸತಾಗಿ ಉಡುಪಿ ಜಿಲ್ಲೆಯನ್ನು 1997 ಆಗಸ್ಟ್ 15ರಂದು ರಚನೆ ಮಾಡಲಾಯಿತು.

ಜಿಲ್ಲೆಯ ಉತ್ತರ ಭಾಗದ ಕುಂದಾಪುರ ಮತ್ತು ಆಸುಪಾಸಿನ ಕೆಲವು ಊರುಗಳಲ್ಲಿ ಕುಂದಾಪುರ ಕನ್ನಡ ಅಥವಾ ಕುಂದಗನ್ನಡ ಅಂತ ಅಪರೂಪದ ಕನ್ನಡ ಪ್ರಭೇಧ ಮಾತಾಡ್ತಾರೆ. ಹಾಗೆಯೇ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಕೇರಳದ ಕಾಸರಗೋಡು ಜಿಲ್ಲೆಯ ಹವ್ಯಕ ಬ್ರಾಹ್ಮಣರು ಹವ್ಯಕ ಕನ್ನಡ ಅಥವಾ ಹವಿಗನ್ನಡ ಮಾತಾಡ್ತಾರೆ. ಪುತ್ತೂರು, ಸುಳ್ಯ ಮತ್ತು ಕೊಡಗು ಜಿಲ್ಲೆಯ ಮಡಿಕೇರಿ ಸುತ್ತಮುತ್ತಲಿನ ಗೌಡ ಸಮುದಾಯದವರು ಅರೆಭಾಷೆ ಅಥವಾ ಅರೆಗನ್ನಡ ಮಾತಾಡ್ತಾರೆ. ಕೆಲವರು ಅದನ್ನು ಗೌಡ ಕನ್ನಡ ಅಂತ ಸಹ ಹೇಳ್ತಾರೆ.



ಉಳಿದಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಜನರು ಮಾತಾಡುವ ಕನ್ನಡ ಭಾಷೆಯನ್ನು ಮಂಗ್ಳೂರ್ ಕನ್ನಡ ಅಂತ ಹೇಳ್ತಾರೆ. ನಮ್ಮ ಕನ್ನಡ ಚಲನಚಿತ್ರಗಳಲ್ಲಿ ಕೆಲವು ನಟರು ವಿಡಂಬನೆ ಮಾಡ್ತಾರಲ್ಲ, ಅಷ್ಟು ಕೆಟ್ಟದಾಗಿಲ್ಲ ಮಂಗ್ಳೂರ್ ಕನ್ನಡ ಮಾತಾಡುವ ರೀತಿ.

ಮಂಗ್ಳೂರು ಕನ್ನಡ ಸ್ವಚ್ಛ ಮತ್ತು ಗ್ರಾಂಥಿಕ ಭಾಷೆ. ಕನ್ನಡ ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಮಾತಾಡುವಾಗ ಮತ್ತು ಬರವಣಿಗೆಯಲ್ಲಿ ಸರಿಯಾಗಿ ಉಪಯೋಗ ಮಾಡುವ ಸಾಮರ್ಥ್ಯ ಈ ಪ್ರದೇಶದ ಜನರಿಗೆ ಉಂಟು. ಇದಕ್ಕೆ ಕಾರಣ ಅಂತ ಹೇಳಿದ್ರೆ ಇಲ್ಲಿನ ಹೆಚ್ಚಿನ ಜನರ ಮಾತೃಭಾಷೆ ಮತ್ತು ವ್ಯವಹಾರದ ಭಾಷೆ ತುಳು ಅಥವಾ ಕೊಂಕಣಿ ಆಗಿರ್ತದೆ. ಕನ್ನಡ ನಾವು ಓದಿ, ಬರೆದು ಕಲಿತ ಭಾಷೆ. ಇತ್ತೀಚಿನ ವರ್ಷಗಳಲ್ಲಿ ಬೇರೆ ಬೇರೆ ಊರುಗಳಿಂದ ಜನರು ಬರುವುದರಿಂದ ಮಾರ್ಕೆಟ್‌ನಲ್ಲಿ ಹೆಚ್ಚು ಜನ ಕನ್ನಡ ಮಾತಾಡುವವರು ಸಿಗ್ತಾರೆ.

ಮಂಗ್ಳೂರ್ ಕನ್ನಡದ ವಿಷಯ ಇಷ್ಟು ಹೇಳಿದ ಮೇಲೆ ನಮ್ಮ ಶೈಲಿಯ ಸಂಭಾಷಣೆಯ ಛಾಯೆ ಹೇಗಿರ್ತದೆ ಅಂತ ಸ್ವಲ್ಪ ಹೇಳದಿದ್ದರೆ ಹೇಗೆ ಅಲ್ವ? ನಾನು ವರ್ಗಾವಣೆಗೊಂಡು ಬೆಂಗಳೂರಿಗೆ ಹೋದ ಹೊಸದರಲ್ಲಿ, ಅಂದರೆ ಕೋವಿಡ್‌ಗಿಂತ ಮೊದ್ಲು ಮಂಗಳೂರಿನ ಬಂಧುಗಳು ಮತ್ತು ಸ್ನೇಹಿತರು ಆಗೊಮ್ಮೆ ಈಗೊಮ್ಮೆ ಫೋನ್ ಮಾಡಿ ಸುಖ ದುಃಖ ವಿಚಾರಿಸ್ತಿದ್ರು. ಜೂನ್ ತಿಂಗಳಲ್ಲಿ ಫೋನ್ ಮಾಡಿದ್ರೆ ಹೇಗಿರ್ತದೆ ನೋಡಿ.

‘ಹೇಗಿದ್ದೀರಿ ಕನ್ನೆಪ್ಪಾ, ಅಲ್ಲಿ ಜೋರು ಮಳೆ ಉಂಟಾ?’ ಅಂತ ಸುರು ಮಾಡಿ, ‘ಅಲ್ಲ, ಟಿವಿ ವಾರ್ತೆಯಲ್ಲಿ ನೋಡಿದೆ, ಬೆಂಗ್ಳೂರಿನಲ್ಲಿ ತುಂಬಾ ಮಳೆ, ರಸ್ತೆಗಳಲ್ಲಿ ನೀರು ನಿಂತು ಜನಜೀವನ ಅಸ್ತವ್ಯಸ್ತ ಅಂತ ನಿನ್ನೆಯಿಂದ ಬರ್ತಾ ಉಂಟು, ನೀವು ಉಷಾರಿದ್ದೀರಲ್ವ?’. ಅವರ ಸ್ವರದಲ್ಲಿನ ಕಾಳಜಿ ನನಗೆ ಅರ್ಥ ಆಗ್ತಿತ್ತು. ಯಾವುದೋ ತಗ್ಗು ಪ್ರದೇಶದಲ್ಲಿ, ಅಂಡರ್‌ಪಾಸ್‌ನಲ್ಲಿ ಅಥವಾ ಚರಂಡಿಯೇ ಇಲ್ಲದ ರಸ್ತೆಯ ಮೇಲೆ ನೀರು ನಿಂತು ಕೃತಕ ನೆರೆಯಂತಹ ಪರಿಸ್ಥಿತಿ ಉದ್ಭವಿಸುವುದು ಬೆಂಗ್ಳೂರಿಗೆ ಏನೂ ಹೊಸತಲ್ಲ. ಆದರೆ ಕೂಗುಮಾರಿ ದೃಶ್ಯ ಮಾಧ್ಯಮ ವಾಹಿನಿಗಳು ಬ್ರೇಕಿಂಗ್ ನ್ಯೂಸ್ ಹೆಸರಿನಲ್ಲಿ 24 ಗಂಟೆ, 36 ಗಂಟೆ, 48 ಗಂಟೆ ಅದನ್ನೇ ಮತ್ತೆ ಮತ್ತೆ ತೋರಿಸಿ ಬೆಂಗಳೂರು ಮುಳುಗಿಯೇ ಹೋಯಿತು, ಬಡಾವಣೆಗಳು ನೆರೆಯಲ್ಲಿ ಕೊಚ್ಚಿಕೊಂಡು ಹೋದವು ಅನ್ನುವ ಹಾಗೆ ಕಿರುಚುತ್ತಾ ಇದ್ದರೆ ಬೇರೆ ಊರುಗಳಲ್ಲಿರುವ ನೆಂಟರಿಗೆ ಮತ್ತು ಸ್ನೇಹಿತರಿಗೆ ಗಾಬರಿ ಆಗದೆ ಇರ್ತದಾ?

ಹಾಗೆ ನೋಡಿದರೆ ಕರಾವಳಿಯವರಿಗೆ ಧಾರಾಕಾರ ಮಳೆಯೇನೂ ಹೊಸದಲ್ಲ